ಡಾ. ಪ್ರೇಮಲತ ಬಿ.

ಕಲೆ: ಡಿ.ಕೆ. ರಮೇಶ್

# ಐದು ಬೆರಳುಗಳು



ಅವತ್ತು ರಾತ್ರಿಯೆಲ್ಲ ವಿಶ್ವನಿಗೆ ನಿದ್ರೆ ಬರಲಿಲ್ಲ. ಎದ್ದು ಶತಪಥ ಹಾಕುತ್ತಲೇ ಇದ್ದ. ನಾಳೆ ಕೆಲಸಕ್ಕೆ ಹೋಗುವುದು ಹೇಗೆ? ಎನ್ನುವ ಚಿಂತೆಯಲ್ಲಿದ್ದ.

"ಆಗಬಾರದ ಅನಾಹುತ ನಡೆದುಹೋಗಿತ್ತು. ಈಗೇನು ಮಾಡಲಿ? ರಾಜೀನಾಮೆ ಪತ್ರವನ್ನೂ ಜೊತೆಗೇ ಒಯ್ಯಲೇ? ಅಥವಾ ತಪ್ಪೊಪ್ಪಿಗೆ ಪತ್ರವನ್ನು ನೀಡಿ ಕ್ಷಮಾಪಣೆ ಕೇಳಿದರೆ ಸುಮ್ಮನಾಗಬಹುದಾ?'' ಅಂತ ಅವನಲ್ಲಿ ಯೋಚನೆ ಶುರುವಾಯಿತು.

ಥೂ, ಯಾಕಾದರೂ ಹೋದೆನೋ? ನನ್ನೊಡನೆ ಕೆಲಸ ಮಾಡುವ ಗಫೂರ್ ಕಳ್ ನನ್ಮಗ, ತಪ್ಪಿಸಿಕೊಂಡುಬಿಟ್ಟ. ನಾನು ಕೂಡ ಸಾಮಾನ್ಯವಾಗಿ ಹೋಗುವವನಲ್ಲ. ಆದರೆ, ಈ ಚಳಿ, ಒಂಟಿತನ, ಏಕತಾನತೆಯ ಕೆಲಸದಿಂದ ತಪ್ಪಿಸಿಕೊಳ್ಳಲು ಒಮ್ಮೆ ಹೋಗಿ ನೋಡೋಣವೆಂದು ಹೋದರೆ ಆಗಬಾರದ್ದು ಆಗಿ ಹೋಗಿತ್ತು. ಹೋಗದಿದ್ದರೆ 'ಇಂಡಿಯಾದ ಜನ ನಮ್ಮ ಸಂಸ್ಕೃತಿಗೆ ಹೊಂದಿಕೊಳ್ಳುವ ಪ್ರಯತ್ನವನ್ನೇ ಮಾಡಲ್ಲ' ಅಂದುಕೊಳ್ಳುವುದಿಲ್ಲವೆ?

"ಬರೀ ಕೆಲಸ ಬಂದರೆ ಸಾಲದು, ವ್ಯಕ್ತಿತ್ವ ಮುಖ್ಯ. ಕಲಿಯಲು ಮನಸ್ಸಿದ್ದರೆ, ಹೊಂದಾಣಿಕೆ ತೋರಿಸಿದರೆ, ಕೋತಿಗೂ ಕೆಲಸ ಕಲಿಸಬಹುದು" ಅಂತ ನನ್ನ ತರಬೇತುದಾರ ಮಿ. ಡೌನಿ ಹೇಳಿರಲಿಲ್ಲವೆ? 'ಬಾ ಪಾರ್ಟಿಗೆ' ಅಂತ ಕರೆದು ಅವರು ಒಂದು ಕೈ ಚಾಚಿದರೆ, ನಾವೂ ಹೋಗುವ ಮೂಲಕ ಸ್ಪಂದಿಸದಿದ್ದರೆ ಚಪ್ಪಾಳೆ ಹೇಗಾಗಬಲ್ಲದು? ಹೊಂದಾಣಿಕೆ ಇಲ್ಲದಿದ್ದರೆ